ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಗುರುವಾರ, ದಿನಾಂಕ : 19 ನೇ ಮಾರ್ಚ್, 2020

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪೊಲೀಸ್ ಸಿಬ್ಬಂದಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ

ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) :-

1226 (1469) ಮಾನ್ಯ ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ಪೊಲೀಸ್ ಸಿಬ್ಬಂದಿ ಎರವಲು/ಒಒಡಿ ಸೇವೆಯ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವುದು ನಿಜವೆ ; ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವವರ ಹೆಸರು, ಹುದ್ದೆ ಮತ್ತು ಯಾವ ದಿನಾಂಕದಿಂದ ಕೆಲಸ ನಿರ್ವಹಿಸುತ್ತಿದ್ದಾರೆ;

(ಆ) ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಇಲಾಖೆಯ ಎರವಲು ಸೇವೆಯ ಅಧಿಕಾರಿ/ನೌಕರರು ಈ ಹಿಂದೆ ಎರವಲು ಸೇವೆಯ ಆಧಾರದಲ್ಲಿ ಬಿ.ಡಿ.ಎ ಗೆ ನಿಯೋಜನೆಗೊಂಡಿದ್ದಾರೆ ; ಇದ್ದಲ್ಲಿ, ಅಂತಹವರ ಹೆಸರು, ಹುದ್ದೆ ಮತ್ತು ಎಷ್ಟು ಬಾರಿ ನಿಯೋಜನೆಗೊಂಡಿದ್ದರು ಎಂಬ ವಿವರಗಳನ್ನು ನೀಡುವುದು ;

(ಇ) ನಿಯೋಜನೆಗೊಂಡಿರುವ ಪೊಲೀಸ್ ಸಿಬ್ಬಂದಿಗಳು ಪ್ರಾಧಿಕಾರದಲ್ಲಿ ನಿರ್ವಹಿಸಬೇಕಾದ ಕೆಲಸ ಕಾರ್ಯಗಳ ವಿವರ ನೀಡುವುದು ;

(ಈ) ನಿರ್ದಿಷ್ಟಪಡಿಸಿದ ಪೊಲೀಸ್ ಕಾರ್ಯವನ್ನು ಹೊರತುಪಡಿಸಿ ನಿಯೋಜಿತಗೊಂಡ ಪೊಲೀಸರು ಪ್ರಾಧಿಕಾರದ ಕಡತಗಳ ಕಾರ್ಯನಿರ್ವಹಣೆಯನ್ನು ಮಾಡುತ್ತಿರುವುದು ನಿಜವೇ ; ಇದ್ದಲ್ಲಿ, ಇದಕ್ಕೆ ಕಾರಣವೇನು ; ಈ ಕಾರ್ಯನಿರ್ವಹಣೆಯನ್ನು ಪ್ರಾಧಿಕಾರದ ಸಿಬ್ಬಂದಿಗಳು ಕೈಗೊಳ್ಳುವುದಿಲ್ಲವೇ ; ಇಲ್ಲದಿದ್ದಲ್ಲಿ, ಇದಕ್ಕೆ ಕಾರಣವೇನು;

(ಉ) ಸದರಿ ಪೊಲೀಸರು ಪೊಲೀಸ್ ಇಲಾಖೆಯಲ್ಲಿ ನೇಮಕಾತಿಯಾದ ಹುದ್ದೆಗೆ ತಕ್ಕಂತೆ ಕೆಲಸ ನಿರ್ವಹಿಸಿ ನ್ಯಾಯ ಒದಗಿಸದೇ ಅನಗತ್ಯವಾಗಿ ಪ್ರಾಧಿಕಾರದಲ್ಲಿ ಎರವಲು ಸೇವೆ ಮೇಲೆ ಕರ್ತವ್ಯ ನಿರ್ವಹಿಸದಂತೆ ತಡೆಗಟ್ಟಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ಒದಗಿಸುವುದು)